### ಪುರಾಣ ಕತೆಗಳಲ್ಲಿ ಕೂರ್ಮಾವತಾರ

ವಿಷ್ಣು ತನ್ನ ಎರಡನೇ ಅವತಾರದಲ್ಲಿ ಕೂರ್ಮವಾಗಿ ಬಂದು ಭೂಮಿಯನ್ನು ರಕ್ಷಿಸಿದನೆಂದು ಹಿಂದೂ ಪುರಾಣಗಳಲ್ಲಿ ಹೇಳಲಾಗಿದೆ. ಹೆಸರಾಂತ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಬರೆದ 'ಎ ಬ್ರೀಫ್ ಹಿಸ್ಟರಿ ಆಫ್ ಟೈಮ್' ಕೃತಿಯಲ್ಲಿ ಇದನ್ನು ನೆನಪಿಸುವಂತಹ ಕತೆಯೊಂದಿದೆ: ವಿಶ್ವದ ಉಗಮದ ಬಗ್ಗೆ ಪ್ರಸಿದ್ಧ ಖಗೋಳವಿಜ್ಞಾನಿಯೊಬ್ಬ ಪಾಂಡಿತ್ಯಪೂರ್ಣ ಪ್ರಬಂಧವನ್ನು ಮಂಡಿಸಿದ ನಂತರ ಮಹಿಳೆಯೊಬ್ಬಳು ತಕರಾರು ತೆಗೆಯುತ್ತಾಳೆ. "ನೀವು ಹೇಳುವುದೆಲ್ಲ ತಪ್ಪು; ವಾಸ್ತವವಾಗಿ ಇಡೀ ಜಗತ್ತೇ ಒಂದು ಆಮೆಯ ಮೇಲೆ ನಿಂತಿದೆ" ಎಂದು ಹೇಳುತ್ತಾಳೆ.

"ಹಾಗಿದ್ದರೆ ಆ ಆಮೆ ಯಾವುದರ ಮೇಲೆ ನಿಂತಿದೆಯಮ್ಮಾ?" ಎಂದು ಆ ವಿಜ್ಞಾನಿ ಪ್ರಶ್ನಿಸುತ್ತಾನೆ. ಅದಕ್ಕೆ, "ಯಾವುದರ ಮೇಲೆ ಅದು ಯಾಕೆ ನಿಲ್ಲಬೇಕು? ಅತ್ಯಂತ ಆಳದವರೆಗೂ ಬರೀ ಆಮೆಯೇ!'' ಎಂದು ಆಕೆ ಉತ್ತರಿಸುತ್ತಾಳೆ.



ಇದು ಆಮೆ ಮರಿಗಳ ಸಂರಕ್ಷಣೆಯ ಸಮಯ

ಬೀಚಿನಲ್ಲಿ ಅರಣ್ಯ ಇಲಾಖೆ ಇಲ್ಲಿನ ಮೀನುಗಾರರ ಸಹಾಯದಿಂದ ಎರಡು ಕಿಲೊಮೀಟರ್ ಉದ್ದಕ್ಕೂ ಇರುವ 78 ಮೊಟ್ಟೆಗೂಡುಗಳನ್ನು ಗುರುತಿಸಿ, ಅವಕ್ಕೆ ಬೇಲಿ ನಿರ್ಮಿಸಿ, ಕ್ರಮಸಂಖ್ಯೆ ಕೊಟ್ಟಿದೆ. ಮೀನುಗಾರರ ಶ್ರಮಕ್ಕೆ ಸರಕಾರದಿಂದ ಪ್ರತಿಫಲ ಸಿಕ್ಕಿತೆ?

"ಬೇಲಿಗೂಟ ಮತ್ತು ಸೂಚನಾಫಲಕ ಮಾತ್ರ ಅರಣ್ಯ ಇಲಾಖೆಯದ್ದು. ಅದನ್ನು ಮರಳಲ್ಲಿ ಹೂತು, ಮೀನುಗಾರರು ತಮ್ಮದೇ ಬಲೆಯನ್ನು ಸುತ್ತ ಕಟ್ತಾರೆ. ಫಲಕವನ್ನು ಅಂಟಿಸ್ತಾರೆ. ಗೂಡು ಪತ್ತೆ ಮಾಡಿದವರಿಗೆ ಸಾವಿರ ರೂಪಾಯಿ ಕೊಡುತ್ತೇನೆಂದು ಇಲಾಖೆ ಘೋಷಿಸಿತ್ತು. ಈ ಮೂರು ವರ್ಷಗಳಲ್ಲಿ ಯಾರಿಗೂ ಬಿಡಿಗಾಸು ಬಂದಿಲ್ಲ. ಇನ್ನು ಕೂಲಿ ಮಾತೆಲ್ಲಿ" ಎನ್ನುತ್ತ, ಅದಕ್ಕೆ ದಾಖಲೆಗಳನ್ನು ತೋರಿಸಲೆಂದು ಅಷ್ಟು ಹೊತ್ತೂ ಬೆನ್ನ ಮೇಲಿದ್ದ ಮೂಟೆಯನ್ನು ಮೇಸ್ತ ಇಳಿಸಿದರು.

ಅದೇ ಹೊತ್ತಿಗೆ ಅವರ ಮೊಬೈಲ್‌ಗೆ ಕರೆ ಬಂತು. ಡಾ. ಮೇಸ್ತ ಮೇಲಿದ್ದರು. "ಮರಿಗಳು ಹೊರಕ್ಕೆ ಬರ್ತಾ ಇದಾವಂತೆ, ಹೊರಡೋಣವಾ?" ಎಂದು ಕೇಳುತ್ತ, ಕೊಂಕಣಿ ಭಾಷೆಯಲ್ಲಿ ತಮ್ಮ ಗೆಳೆಯರಿಗೆ ಅದೇನೇನೋ ಸೂಚನೆ ಕೊಟ್ಟರು. ಕೆಲವೇ ಕ್ಷಣಗಳಲ್ಲಿ ಮೂರು ನಾಲ್ಕು ಬೈಕ್‌ಗಳಲ್ಲಿ ಮೀನುಗಾರ ಯುವಕರು ನಮ್ಮ ಜೊತೆಯಾದರು.

ಹೊನ್ನಾವರದ ಕಾಸರಕೋಡು ಎಂದರೆ, ಶರಾವತಿ ನದಿ ಸಮುದ್ರ ಸೇರುವ ಪ್ರದೇಶ. ದೇಶದ ಎಲ್ಲ ಬಂದರುಗಳನ್ನೂ ಅತ್ಯಾಧುನಿಕಗೊಳಿಸಲೆಂದು ಭಾರತ ಸರ್ಕಾರ ಹಾಕಿಕೊಂಡ 'ಸಾಗರ್ ಮಾಲಾ' ಯೋಜನೆ ಇಲ್ಲೂ ಜಾರಿಗೆ ಬರಲಿದೆ. ಹಾಗಾಗಿ

### ಕಡಲಾಮೆಗಳ ಕುಂಭಮೇಳ

ಒಡಿಶಾದ ಗಹಿರ್ಮಾತಾ ಕಡಲತೀರದಲ್ಲಿ ಪ್ರತಿವರ್ಷ ಆಲಿವ್ ರಿಡ್ಲೆಗಳ ಮಹಾಮೇಳ ಸೇರುತ್ತದೆ. ಅದು ಜಗತ್ತಿನ ಅತಿದೊಡ್ಡ ರಿಡ್ಲೆ ಜಾತ್ರೆ. ಲಕ್ಷಾಂತರ ಆಮೆಗಳು ಸೈನ್ಯದೋಪಾದಿಯಲ್ಲಿ ಸಮುದ್ರದಿಂದ ಮೇಲೆದ್ದು ಬರುತ್ತವೆ. ಈ ವರ್ಷ ಫೆಬ್ರುವರಿ–ಮಾರ್ಚ್ ತಿಂಗಳಲ್ಲಿ ಅಲ್ಲಿನ ಭಿತರ್‌ಕರ್ಣಿಕಾ ಕಾಂಡ್ಲಕಾಡಿನ ಸುತ್ತ ಐದು ಲಕ್ಷಕ್ಕೂ ಹೆಚ್ಚು ಆಮೆಗಳು ಬಂದು ಮೊಟ್ಟೆ ಇಟ್ಟಿವೆ. ಎಲ್ಲ ಜಾತ್ರೆಗಳಲ್ಲಿ ನಡೆಯುವಂತೆ ಇಲ್ಲೂ ಕೋಲಾಹಲ, ಗೊಂದಲ; ಗುಂಡಿ ತೋಡಲು ಪೈಪೋಟಿ ನಡೆಯುತ್ತವೆ. ತಡವಾಗಿ ಬಂದ ಆಮೆಗಳಿಗೆ ಗುಂಡಿ ತೋಡಲು ಬೇರೆ ಸ್ಥಳವಿಲ್ಲದೆ, ಹಿಂದಿನ ಗುಂಡಿಗಳನ್ನೇ ಅಗೆದು, ಅಲ್ಲಿದ್ದ ಮೊಟ್ಟೆಗಳನ್ನು ಚಿಂದಿ ಮಾಡಿ ಮೊಟ್ಟೆ ಇಡುತ್ತವೆ. ಕೆಲ ಆಮೆಗಳು ಮೊಟ್ಟೆ ಇಡಲು ಜಾಗ ಸಿಗದೆ ಮತ್ತೆ ಮರಳಿ ಸಮುದ್ರಕ್ಕೆ ಹೋಗಿ ವಾರಗಳ ನಂತರ ಬರುತ್ತವೆ. ಮೊಟ್ಟೆ ಇಡಲು ಬರುವ ಆಮೆಸೈನ್ಯ ನೋಡಲು ಪ್ರೇಕ್ಷಕರು, ಕೂರ್ಮಪ್ರೇಮಿಗಳು, ಸಂಶೋಧಕರು, ಸಂರಕ್ಷಕರು, ಆರಕ್ಷಕರು ಸಂದಣಿಸುತ್ತಾರೆ. 45 ದಿನಗಳ ನಂತರ ಗೂಡುಗಳಿಂದ ಹೊರಬರುವ ಮರಿಗಳನ್ನು ನೋಡಲು ಮತ್ತದೇ ನೂಕುನುಗ್ಗಲು.

ಇಲ್ಲಿನ ಸಾಂಪ್ರದಾಯಿಕ ಬಂದರವೂ ಹೊಸ ಅವತಾರಕ್ಕೆ ಸಜ್ಜಾಗುತ್ತಿದೆ. ಅದಕ್ಕೆಂದು ಇಲ್ಲಿ ಸಮುದ್ರ ತೀರಕ್ಕೆ ಸಮಾನಾಂತರವಾಗಿ ಮರಳು ದಿಬ್ಬದ ಮೇಲೆ ಹೊಸದೊಂದು ಚತುಷ್ಪಥ ರಸ್ತೆ ಸಿದ್ಧವಾಗುತ್ತಿದೆ. ಆ ರಸ್ತೆಯಿಂದ ನಾಲ್ಕಾರು ಮೀಟರ್ ದೂರದಲ್ಲೇ ಸಮುದ್ರದ ಕಡೆ ಸಾಲಾಗಿ ಮೊಟ್ಟೆಗೂಡುಗಳಿದ್ದವು. ಒಂದೊಂದಕ್ಕೂ ಚಚ್ಚೌಕದ ಬೇಲಿ ಕಟ್ಟಿ ರಕ್ಷಣೆ ಒದಗಿಸಲಾಗಿತ್ತು. ಕಗ್ಗತ್ತಲಲ್ಲಿ, ಕಲ್ಲು ಮರಳುಗಳ ಏರಿಳಿತದ ಆ ರಸ್ತೆಯಲ್ಲಿ ನಾವು ಬೈಕ್‌ನಲ್ಲಿ ಒಂದೂವರೆ ಕಿಲೊಮೀಟರ್ ಸಾಗಿದಾಗ ಒಂದು ಮೊಟ್ಟೆಗೂಡಿನ ಸುತ್ತ ಯುವಕರ ಇನ್ನೊಂದು ಗುಂಪು ದಟ್ಟಣಿಸಿತ್ತು. ಅವರೆಲ್ಲರೂ ಮೀನುಗಾರರು. ಎಲ್ಲರ ಉಪನಾಮವೂ ತಾಂಡೇಲ. ಮೊಟ್ಟೆಗೂಡನ್ನು ಸುತ್ತುವರಿದಿದ್ದ ಅವರೆಲ್ಲ ನಮಗೆ ದಾರಿ ಮಾಡಿಕೊಟ್ಟರು. ಯಾರೋ ಒಬ್ಬ ಮೊಬೈಲ್ ಟಾರ್ಚ್ ಮೂಲಕ ಗೂಡಿನೊಳಕ್ಕೆ ಬೆಳಕು ಬಿಟ್ಟಿದ್ದೇ ತಡ, "ಡೈರೆಕ್ಟ್ ಲೈಟ್ ಹಾಕಬೇಡ್ರೋ" ಎಂದು ಪ್ರಕಾಶ ಮೇಸ್ತ ತಗ್ಗಿದ ದನಿಯಲ್ಲಿ ಸೂಚಿಸಿದರು.

ಈ ಗೂಡುಗಳಲ್ಲಿನ ನೂರಾರು ಮೊಟ್ಟೆಗಳು ಒಮ್ಮೆಲೇ ಒಡೆದು ಮರಿಗಳು ಮೇಲಕ್ಕೆದ್ದು ಬರುವ ಸೋಜಿಗವನ್ನು ಸಂಪೂರ್ಣ ಅರ್ಥ ಮಾಡಿಕೊಳ್ಳಲು ದೇಶವಿದೇಶಗಳ ವಿಜ್ಞಾನಿಗಳು ತಿಣುಕುತ್ತಿದ್ದಾರೆ. ಎಲ್ಲ ಮೊಟ್ಟೆಗಳೂ ಸದಾ ಆಮ್ಲಜನಕವನ್ನು ಹೀರಿಕೊಂಡು ಕಾರ್ಬನ್ ಡೈಆಕ್ಸೈಡನ್ನು ಹೊರಕ್ಕೆ ಬಿಡುತ್ತಿರುವಾಗ, ತಳದಲ್ಲಿದ್ದ ಮೊಟ್ಟೆಗಳು ಜೀವಂತ ಉಳಿದಿರುತ್ತವೆ ಹೇಗೆ? ಕಾವು ಮುಗಿದ ಮೇಲೆ ತಳದಲ್ಲಿದ್ದವೂ ಏಕಕಾಲಕ್ಕೆ ಸುರಕ್ಷಿತ